ತಾಯಿ ಹತ್ತು ದಿನಗಳಾದ ಮೇಲೆ ಅಂಡಮಾನ್ ನಿಕೋಬಾರ್ ದ್ವೀಪಗಳಿಗೆ ಹನಿಮೂನ್‌ಗಾಗಿ ಹೋಗಿ ಬರಲು ಎರಡು ಟಿಕೆಟ್‌ಗಳನ್ನು ಬುಕ್ ಮಾಡಿರುವುದಾಗಿ ಮೊದಲೇ ಹೇಳಿದ್ದರು.

ಪ್ರವಾಸ ನಿಗದಿಯಾಗಿದ್ದ ದಿನ ಬೆಳಿಗ್ಗೆ ಮೆಜೆಸ್ಟಿಕ್‌ನಲ್ಲಿದ್ದ ಟ್ರಾವೆಲ್ ಏಜೆನ್ಸಿಯ ಕಚೇರಿಗೆ ಅವರು ಹೇಳಿದ್ದ ಸಮಯಕ್ಕೆ ನಾವು ತಲುಪಿದೆವು. ನನ್ನ ಅತ್ತೆ ಮಾವ, ರಾಮಚಂದ್ರ ನಮ್ಮಿಬ್ಬರನ್ನು ಅಲ್ಲಿಂದ ಬೀಳ್ಕೊಟ್ಟರು. ಟ್ರಾವೆಲ್ ಏಜೆನ್ಸಿಯವರು ನಮಗೆ ಕೆಲವು ಟಿಪ್ಸ್‌ಗಳನ್ನು ಕೊಟ್ಟು ಬೆಳಿಗ್ಗೆಯೆ ಅವರ ಬಸ್ಸಿನಲ್ಲಿ ಬೆಂಗಳೂರಿನ ವಿಮಾನ ನಿಲ್ದಾಣಕ್ಕೆ ತಲುಪಿಸಿ ಅಲ್ಲಿ ನಾವು ಏರುವ ವಿಮಾನದ ವಿವರಗಳನ್ನು ಹೇಳಿ ಕಳುಹಿಸಿದರು. ನಾವು ಅದರಂತೆ ಎಲ್ಲಾ ವಿಧಿವಿಧಾನಗಳನ್ನು ಮುಗಿಸಿ ವಿಮಾನ ಹತ್ತಿ ಕುಳಿತುಕೊಂಡೆವು. ನಾನು ಸಾವಿತ್ರಿ ಇಬ್ಬರೂ ವಿಮಾನದಲ್ಲಿ ಅಕ್ಕಪಕ್ಕ ಕುಳಿತುಕೊಂಡಿದ್ದೇವೆ. ಸಾವಿತ್ರಿ ಕಿಟಕಿಯ ಪಕ್ಕ ಕುಳಿತುಕೊಂಡಿದ್ದಾಳೆ. ನನಗೆ ವಿಮಾನ ಪ್ರಯಾಣ ಮೊದಲ ಅನುಭವ. ಸಾವಿತ್ರಿ ಅವರ ತಂದೆ ತಾಯಿಯ ಜೊತೆಗೆ ಒಂದೆರಡು ಸಲ ಎಲ್ಲಿಗೋ ಹೋಗಿ ಬಂದಿರುವ ಅನುಭವ ಇರುವುದಾಗಿ ಹೇಳಿದ್ದಳು. ಸಾವಿತ್ರಿಯ ಮುಖವನ್ನು ಕಳೆದ ಹತ್ತು ದಿನಗಳಿಂದ ನೇರವಾಗಿ ನೋಡಿ ಮಾತನಾಡುತ್ತಿದ್ದೇನೆ. ಕಳೆದ ಹತ್ತು ದಿನಗಳಲ್ಲಿ ನಾವಿಬ್ಬರೂ ಎಷ್ಟೋ ವಿಷಯಗಳನ್ನು ಮಾತನಾಡಿದ್ದೇವೆ. ಇದುವರೆಗೂ ನಮ್ಮಿಬ್ಬರ ನಡುವಿನ ಮಾತುಗಳಿಂದ ಯಾರು ಕೋಪಿಸಿಕೊಂಡಿದ್ದಾಗಲಿ, ನನ್ನ ಮಾತಿಗೆ ಅವಳು ಇಲ್ಲ ಎಂದಿದ್ದಾಗಲಿ, ಅವಳ ಮಾತಿಗೆ ನಾನು ಇಲ್ಲ ಎಂದಿದ್ದಾಗಲಿ ನಡೆದಿಲ್ಲ.

ಈ ಮದುವೆ ಎನ್ನುವುದು, ಗಂಡ ಹೆಂಡತಿ ಜೋಡಿಯಾಗುವುದು ಒಂದು ವಿಸ್ಮಯವೇ ಸರಿ. ಯಾರಿಗೆ ಯಾರೋ ಜೊತೆಯಾಗುತ್ತಾರೆ. ಯಾರನ್ನು ಯಾರೋ ಪ್ರೀತಿಸುತ್ತಾರೆ. ಯಾರು ಯಾರನ್ನೋ ಪ್ರೀತಿಸಿ ಬೇರೆಯಾಗುತ್ತಾರೆ. ಮತ್ತೆ ಇನ್ಯಾರನ್ನೋ ಪ್ರೀತಿಸುತ್ತಾರೆ. ಕೆಲವರು ಕೆಲವರನ್ನು ಪ್ರೀತಿಸಿ ಮದುವೆಯಾಗದೇ ಹಾಗೇ ಉಳಿದುಹೋಗುತ್ತಾರೆ. ದೇವದಾಸ್ ಸಾವಿತ್ರಿಗಾಗಿ ಕುಡಿದೂ ಕುಡಿದು ಸತ್ತುಹೋದ. ಸಲೀಂ ಅನಾರ್ಕಲಿಗಾಗಿ ಬದುಕಿದ್ದಾಗಲೇ ಸಮಾಧಿಯಾದ. ಸೋನಿ ಮಹಿವಾಲ್ ಪ್ರೀತಿ ಇನ್ನೊಂದು ರೀತಿ. ಪ್ರೀತಿ ಪ್ರೇಮ ಎನ್ನುವುದಕ್ಕೆ ಕೆಲವೊಮ್ಮೆ ಅರ್ಥಗಳೇ ಇರುವುದಿಲ್ಲ. ಬಹಳ ಮುಖ್ಯವಾದ ವಿಷಯವೆಂದರೆ ಪ್ರೀತಿಗೆ ಜಾತಿ, ಮತ, ಧರ್ಮ ಏನೂ ಕಾಣಿಸುವುದಿಲ್ಲ. ಅದು ಕಣ್ಣಿಲ್ಲದ ಕುರುಡೂ ಕೂಡ. ಆದರೆ ಈಗ ಆಧುನಿಕ ಪ್ರಪಂಚದಲ್ಲಿ ಪ್ರೀತಿಗೂ ಬರ ಬಂದಿದೆ. ಹಣ ಇಲ್ಲದವನಿಗೆ ಪ್ರೀತಿಯೂ ಇಲ್ಲದಂತಾಗಿದೆ. ಹೆಚ್ಚು ಹಣ ಇರುವವನ ಹಿಂದೆ ಪ್ರೀತಿ ನಾಯಿ ಮರಿಯಂತೆ ಬಿದ್ದುಕೊಂಡಿದೆ. ಪ್ರೀತಿ ಕೃತಕವಾಗುತ್ತಿದೆ. ಪ್ರೀತಿ ವಿಕೃತವಾಗುತ್ತಿದೆ ಕೂಡ.

***

## ಇಲ್ಲಿಯವರೆಗೆ



ಪ್ರೊ.ಗುರುನಾಥ್ ಕೃಷ್ಣನಿಗೆ ಪಿಎಚ್‌ಡಿ ಮಾಡುವಂತೆ ಸಲಹೆ ಮಾಡಿದಾಗ ಎರಡು ವಾರ ಗ್ರಂಥಾಲಯದಲ್ಲಿ ಅಧ್ಯಯನ ಮಾಡುತ್ತಾನೆ. ಹಲವಾರು ಅಂತರರಾಷ್ಟ್ರೀಯ ವಿಜ್ಞಾನ ಜರ್ನಲ್‌ಗಳನ್ನು ಅಧ್ಯಯನ ಮಾಡಿದ ಬಳಿಕ ಗುರುನಾಥ್ ಬಳಿ ಪಿಎಚ್‌ಡಿ ಮಾಡುವುದಾಗಿ ನಿರ್ಧರಿಸಿದ್ದನ್ನು ಹೇಳುತ್ತಾನೆ. ಅಲ್ಲಿಂದ ಇಬ್ಬರೂ ಸೀದಾ ಕಾರಿನಲ್ಲಿ ಮಲ್ಲೇಶ್ವರಂನಲ್ಲಿರುವ ತಮ್ಮ ಮನೆಗೆ ಪ್ರೊಫೆಸರ್ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಅವರ ಪತ್ನಿ ಶಾರದಾ ಮ್ಯಾಡಮ್‌ಗೆ ಕೃಷ್ಣನನ್ನು ಪರಿಚಯಿಸುತ್ತಾರೆ. ತನ್ನ ಮಗಳು ಸಾವಿತ್ರಿಯನ್ನೂ ಪರಿಚಯಿಸುತ್ತಾರೆ. ಹಾಗೆ ದಿನಗಳು ಕಳೆಯುತ್ತವೆ. ಕೃಷ್ಣ ಸೆಂಟ್ರಲ್ ಕಾಲೇಜು ಕ್ಯಾಂಪಸ್‌ನಲ್ಲಿ ಪಿಎಚ್‌ಡಿ ಮಾಡತೊಡಗುತ್ತಾನೆ. ಹೀಗೆ ಒಂದು ದಿನ ಪ್ರೊಫೆಸರ್ ತನ್ನ ಮಗಳು ಸಾವಿತ್ರಿಯ ಬಗ್ಗೆ ಏನನ್ನಿಸುತ್ತದೆ ಎಂದು ಪ್ರಶ್ನೆ ಕೇಳುತ್ತಾನೆ. ಕೃಷ್ಣ ತಬ್ಬಿಬ್ಬುಗೊಳ್ಳುತ್ತಾನೆ. ಬಳಿಕ 'ಸಾವಿತ್ರಿಯನ್ನು ನಿನಗೆ ಕೊಟ್ಟು ಮದುವೆ ಮಾಡಬೇಕು ಎಂದು ನಾನು, ಶಾರದಾ ನಿರ್ಧರಿಸಿದ್ದೇವೆ.ನೀನು ಒಪ್ಪಿಕೊಂಡರೆ, ನಿಮ್ಮ ಊರಿಗೆ ಬಂದು ನಿಮ್ಮ ತಂದೆ ತಾಯಿ ಜೊತೆಗೆ ಮಾತನಾಡ್ತೀವಿ. ಇಲ್ಲ ಅಂದರೆ ನಿಮ್ಮ ತಂದೆ ತಾಯೀನ ನಮ್ಮ ಮನೆಗೆ ಕರೆದುಕೊಂದು ಬಂದರೂ ಆಗುತ್ತೆ' ಎನ್ನುತ್ತಾರೆ. ಒಂದು ದಿನ ಕೃಷ್ಣ ಗುರುನಾಥ್ ದಂಪತಿಯನ್ನು ತನ್ನ ಊರಿಗೆ ಕರೆದುಕೊಂಡು ಹೋಗಿ ಪರಿಚಯಿಸಿ ಮದುವೆಯ ಪ್ರಸ್ತಾಪ ಮಾಡುತ್ತಾರೆ. ಕೊನೆಗೆ ಕೃಷ್ಣ–ಸಾವಿತ್ರಿ ಇಬ್ಬರೂ ಮದುವೆಯಾಗುವ ನಿರ್ಧಾರವಾಗುತ್ತದೆ.

ನನಗೆ ಇದು ಮೊದಲ ವಿಮಾನ ಪ್ರಯಾಣವಾದರಿಂದ ಸ್ವಲ್ಪ ಆತಂಕ, ಸ್ವಲ್ಪ ಕುತೂಹಲವೂ ಇತ್ತು. ಗಗನಸಖಿಯರು ವಿಮಾನ ಹೊರಡುವ ಮುಂಚೆ ಕೆಲವು ವಿವರಣೆಗಳನ್ನು ನೀಡಿ ತಮ್ಮ ಸೀಟುಗಳಿಗೆ ಹೋಗಿ ಕುಳಿತುಕೊಂಡರು. ನಾವು ಅವರು ತೋರಿಸಿದಂತೆ ನಮ್ಮ ಸೊಂಟಗಳಿಗೆ ಬೆಲ್ಟ್‌ಗಳನ್ನು ಕಟ್ಟಿಕೊಂಡೆವು. ಈಗ ವಿಮಾನ ನೆಲದ ಮೇಲಿನ ದೊಡ್ಡ ತಿಮಿಂಗಲದ ಹಾಗೆ ಚಲಿಸುತ್ತಾ ಏರ್‌ಸ್ಟ್ರಿಪ್ ಮೇಲೆ ನೇರವಾಗಿ ನಿಂತುಕೊಂಡು ಸದ್ದು ಮಾಡುತ್ತ ವೇಗವಾಗಿ ಚಲಿಸುತ್ತ ದಿಢೀರನೆ ವೇಗ ಹೆಚ್ಚಿಸಿಕೊಂಡು ಕುಪ್ಪಳಿಸಿ ಮೇಲಕ್ಕೆ ನೆಗೆದು ಗಾಳಿಯಲ್ಲಿ ಹಾರತೊಡಗಿತು. ಮತ್ತೆ ಎರಡು ಸಲ ಮೇಲಕ್ಕೆ ಮುಖ ಮಾಡಿ ಹಾರಿ ಕೊನೆಗೆ ಒಂದು ಹಂತ ತಲುಪಿದ ಮೇಲೆ ಜುಯ್... ಎಂದು ಸದ್ದು ಮಾಡುತ್ತ ಹಾರತೊಡಗಿತು.

ಸಾವಿತ್ರಿ ಮತ್ತು ನಾನು ಇಬ್ಬರೂ ವಿಮಾನದ ಸಣ್ಣ ಕಿಟಕಿಯಲ್ಲಿ ಇನ್ನೂ ಹೊರಕ್ಕೆ ನೋಡುತ್ತಲೇ ಇದ್ದೆವು. ಈಗ ಸೂರ್ಯ ಪೂರ್ವದಲ್ಲಿ ಹುಟ್ಟುತ್ತ ಮೇಲಕ್ಕೆ ಬರುತ್ತಿದ್ದು ಆಗಾಗ ವಿಮಾನ ತಿರುಗಿಕೊಂಡಾಗ ಕಣ್ಣುಗಳಿಗೆ ಸೂರ್ಯನ ಕಿರಣಗಳ ಪ್ರಖರತೆ ಫಳಫಳನೆ ಹೊಳೆಯುತ್ತಿತ್ತು. ಈ ಮಹಾನುಭಾವ ಪೂರ್ವದಲ್ಲಿ ಎದ್ದ ಕೂಡಲೇ ಭೂಮಿಗೆ, ಭೂಮಿಯ ಮೇಲಿರುವ ಸಕಲ ಚರಾಚರಗಳಿಗೆ ಕಣ್ಣು, ಮೂಗು, ಕಿವಿ ಎಲ್ಲವನ್ನು ಕೊಟ್ಟುಬಿಡುತ್ತಾನೆ. ಸೂರ್ಯ ಈ ಜಗದ ಕಣ್ಣು. ಅವನಿಲ್ಲದೆ ಭೂಮಿಯ ಮೇಲೆ ಏನೂ ಇರಲಾರದು. ಆದರೆ ಪಾಪ! ಅವನು ಮಾತ್ರ ಲಕ್ಷಾಂತರ ಡಿಗ್ರಿ ಸೆಲ್ಸಿಯಸ್ ಉಷ್ಣಾಂಶದಿಂದ ಕೊತಕೊತನೆ ಉರಿಯುತ್ತಿರುತ್ತಾನೆ.

ಈಗ ನಮ್ಮ ಕಣ್ಣುಗಳಿಗೆ ಸರಿಯಾಗಿ ಏನೂ ಕಾಣಿಸದ ಕಾರಣ ಕಿಟಕಿಯಲ್ಲಿ ನೋಡುವುದನ್ನು ಬಿಟ್ಟು ಕುರ್ಚಿಗಳಲ್ಲಿ ಹಿಂದಕ್ಕೆ ಕುಳಿತುಕೊಂಡೆವು. ಬೆಳಗಿನ ಬೆಳಕಿನಲ್ಲಿ ಸಾವಿತ್ರಿ ನಿಜವಾಗಿಯೂ ಅಪ್ಸರೆಯಂತೆ ಕಾಣುತ್ತಿದ್ದಳು. ನನ್ನಿಂದ ತಡೆದುಕೊಳ್ಳಲಾರದೆ ಅವಳ ಕೆನ್ನೆಯನ್ನು ಒಮ್ಮೆ